ದಿಃ 22-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಎನ್.ವಿ ವಾದಿ ಪರ ವಕೀಲರಿಂದಃ

ನನ್ನ ತಾತನ ಹೆಸರು ಚಿಕ್ಕನರಸಿಂಯ್ಯ. ನಾನು ಗೋವಿಂದಪ್ಪರವರ ಸಂಬಂಧಿಕರಲ್ಲ.ದಾವಾ ಆಸ್ತಿಗಳ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಪಕ್ಕದಲ್ಲಿ ನನಗೆ ಸೇರಿದ ಆಸ್ತಿಗಳು ಇರುವುದಿಲ್ಲ. ವಾದಿ ಮತ್ತು 2 ನೇ ಪ್ರತಿವಾದಿಯ ತಾತನ ಹೆಸರು ನನಗೆ ಗೊತ್ತಿಲ್ಲ. ವಾದಿ ಮತ್ತು 2 ನೇ ಪ್ರತಿವಾದಿಗೆ ಊರಿನಲ್ಲಿ ಎಷ್ಟು ಆಸ್ತಿಗಳಿವೆ ಎಂಬುದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿಯು ಊರಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯು ಎಷ್ಟು ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ದೊಡ್ಡ ನರಸಿಂಹಪ್ಪನ ಮಗನಾದ 1 ನೇ ಪ್ರತಿವಾದಿಯನ್ನು ನಾನು ನೋಡಿದ್ದೇನೆ. ವಾದಿ ಮತ್ತು ಪ್ರತಿವಾದಿಗಳ ನಡುವೆ ಯಾವ ವ್ಯವಹಾರಗಳು ನಡೆದಿವೆ ಎಂಬುದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ತಂದೆಯ ಹೆಸರು ದೊಡ್ಡನರಸಿಂಹಪ್ಪ. ದೊಡ್ಡನರಸಿಂಹಪ್ಪರವರ ಜೀವಿತಾ ಕಾಲದಲ್ಲಿ ವಾದಿ ಮತ್ತು ಪ್ರತಿವಾದಿಗಳು ವಿಭಾಗವನ್ನು ಮಾಡಿಕೊಂಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ನನ್ನ ಸ್ನೇಹಿತ ಎಂದರೆ ಸರಿ. ನನಗೆ ವಾದಿಯ ಮೇಲೆ ದ್ವೇಷ ಇರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ವ್ಯವಹಾರಗಳ ಬಗ್ಗೆ ನನಗೆ ವೈಯಕ್ತಿಕವಾಗಿ ಮಾಹಿತಿ ಇಲ್ಲದಿದ್ದರೂ 2 ನೇ ಪ್ರತಿವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು